# 3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚನ್ನರಾಯಪಟ್ಟಣ.

**ಸಿ.ಸಿ.ಃ 58/2013**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ ನೀತು | ಸಿಡಬ್ಲ್ಯೂ -1 |
| **ತಂದೆ/ಗಂಡನ ಹೆಸರು** | ಃ ಬಸವೇಗೌಡ | ಪಿ ಡಬ್ಲ್ಯೂ1 |
| **ವಯಸ್ಸು** | ಃ 34 ವರ್ಷ | |
| **ಉದ್ಯೋಗ** | ಃ ಮನೆ ಕೆಲಸ | ಪ್ರಮಾಣ ವಚನ ಬೋಧಿಸಲಾಯಿತು |
| **ವಾಸ** | ಃ ಮಾಯಸಂದ್ರ | ದಿನಾಂಕಃ 25-10-2018 |

**ಕಲಂ 299 ರ ಸಿ ಆರ್ ಪಿ ಸಿ ಅಡಿಯಲ್ಲಿ ಮುಖ್ಯ ವಿಚಾರಣೆ ಃ- ನುರಿತ ಎ.ಪಿ.ಪಿ. ಯವರಿಂದಃ**

ಚಾಸಾ-2 ನಮ್ಮ ಮಾವನ ಮಗಳು . ದಿನಾಂಕ 21-1-2012 ರಂದು ಮದ್ಯಾಹ್ನ 1 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-2 ಹೊನ್ನೇನಹಳ್ಳಿಯಿಂದ ಬೂಕನಬೆಟ್ಟದ ದೇವಸ್ಥಾನಕ್ಕೆ ಹೋಗಿ ದೇವಸ್ಥಾನದ ಹತ್ತಿರ ನಿಂತಿದ್ದಾಗ ಯಾರೋ ಮೂರು ಜನರು ಅಪರಿಚಿತ ಹೆಂಗಸರು ಬಂದು ಹಿರಿಸಾವೆಗೆ ಹೋಗುವ ರಸ್ತೆಯ ಬಗ್ಗೆ ಕೇಳುತ್ತಿದ್ದರು. ನಾವು ಸುಮಾರು 5-6 ಕೀ ಮೀ ಆಗುತ್ತದೆಂದು ತಿಳಿಸಿರುತ್ತೇವೆ . ಸದರಿ ಮೂರು ಜನರ ಪೈಕಿ ಒಬ್ಬರು ನನ್ನ ಕೊರಳಲ್ಲಿದ್ದ ಒಂದು ಎಳೆ ಚಿನ್ನದ ಸರವನ್ನು ಕಿತ್ತುಕೊಂಡು ಓಡಿಹೋದರು. ನಾವು ಕೂಗಿಕೊಂಡು ಅವರನ್ನು ಹಿಂಬಾಲಿದಾಗ ಅವರು ತಪ್ಪಿಸಿಕೊಂಡು ಓಡಿಹೋಗಿರುತ್ತಾರೆ . ಅವರು ಕನ್ನಡ ಭಾಷೆಯಲ್ಲಿ ಮಾತನಾಡುತ್ತಿದ್ದು 25 ವರ್ಷ ಮೇಲ್ಪಟ್ಟವರಾಗಿದ್ದರು. ಆರೋಪಿತರು ಕಳ್ಳತನಮಾಡಿದ ಸರ 16 ಗ್ರಾಂ ತೂಕದ್ದಾಗಿದ್ದು ರೂ. 45000 ಗಳವರೆಗೆ ಬೆಲೆಬಾಳುತ್ತಿತ್ತು . ನಂತರ ನಾವು ಠಾಣೆಗೆ ದುಃರು ನೀಡಿರುತ್ತೇವೆ . ಸಾಕ್ಷಿ ದೂರನ್ನು ಗುರುತಿಸಿದ್ದು ಅದನ್ನು ನಿಪಿ-1 ಎಂದು , ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು . ಅದೇ ದಿನ ಸಂಜೆ ಪೋಲಿಸರು ಫೋನ್ ಮಾಡಿ ಆರೋಪಿತರು ಸಿಕ್ಕಿರುವ ಬಗ್ಗೆ ತಿಳಿಸಿರುತ್ತಾರೆ . ನಂತರ ನಾವು ಠಾಣೆಗೆ ಹೋಗಿರುತ್ತೇವೆ . ಠಾಣೆಯಲ್ಲಿ ನನ್ನಿಂದ ಸರ ಕಿತ್ತು ಕೊಂಡುಹೋದ ಮೂರು ಜನ ಹೆಂಗಸರನ್ನು ತೋರಿಸಿರುತ್ತಾರೆ . ಆ ಪೈಕಿ ಒಬ್ಬರ ಹೆಸರು ಗಂಗಮ್ಮ ಎಂದು ಗೊತ್ತಾಗಿರುತ್ತದೆ . ಠಾಣೆಯಲ್ಲಿರುವ ಮೂರು ಜನ ಹೆಂಗಸರೇ ನನ್ನಿಂದ ಸರ ಕಿತ್ತುಕೊಂಡು ವ್ಯಕ್ತಿಗಳಾಗಿರುತ್ತಾರೆ . ಠಾಣೆಯಲ್ಲಿ ಆ ಸಮಯದಲ್ಲಿ ಸರವನ್ನು ತೋರಿಸಿರುತ್ತಾರೆ . ಪ್ರಕರಣ ಕುರಿತು ಪೋಲಿಸರಿಗೆ ಮರು ಹೇಳಿಕೆ ನೀಡಿದ್ದೇನೆ . ಆರೋಪಿತರು ಕಳ್ಳತನಮಾಡಿಕೊಂಡು ಹೋದ ಸರವನ್ನು ನೋಡಿದರೆ ಗುರುತಿಸುತ್ತೇನೆ .

ಸಾಕ್ಷಿಯು ಸರವನ್ನು ತೋರಿಸಿ ಗುರುತಿಸಿದ್ದು ಕಾರಣ ಅದನ್ನು ಮುದ್ದೆಮಾಲು-1 ಎಂದು ಗುರುತಿಸಲಾಯಿತು . ಸಾಕ್ಷಿಗೆ ಪುನಃ ಸರವನ್ನು ವಾಪಸ್ ನೀಡಲಾಯಿತು ಮೂರು ಜನ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ .

ಪಾಟೀ ಸವಾಲು ಃ- ಇಲ್ಲ

ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಸ.ಇ.ಎ.ಒ.,

3ನೇ ಅಧಿಕ ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ